**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ಎಲ್. ಭೋಜೇಗೌಡ, ಇವರ ನಿಯಮ 330 ರ ಮೇರೆಗೆ ಉತ್ತರ.**

*****

**ಪ್ರಶ್ನೆ:** ಕರ್ನಾಟಕ ರಾಜ್ಯ ಒಕ್ಕಲಿಗರ ಅಭಿವೃದ್ಧಿ ನಿಗಮದಿಂದ ಅರಿವು ಯೋಜನೆಯಡಿ ಶೈಕ್ಷಣಿಕ ಸಾಲವನ್ನು ನೀಡಲಾಗುತ್ತಿದೆ. ವಿಧಾನಸಭಾ ಕ್ಷೇತ್ರ ಬದಲಾವಣೆಯಾಗುತ್ತಿದ್ದು ಇದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ವಿದ್ಯಾರ್ಥಿಯ ಖಾಯಂ ವಿಳಾಸವಿರುವ ಕಡೆ ಅರ್ಜಿಗಳನ್ನು ವರ್ಗಾಯಿಸಿ ಸಾಲ ನೀಡಬೇಕಾಗಿರುತ್ತದೆ. ಆದರೆ, ಅರ್ಜಿಗಳನ್ನು ವರ್ಗಾಯಿಸದೇ ಕೆಲವು ಕಛೇರಿಗಳಲ್ಲಿ ರದ್ದುಪಡಿಸುತ್ತಿರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ. ಮುಂದುವರೆದು ಸಾಲ ಮಂಜೂರಾದ ವಿದ್ಯಾರ್ಥಿಗಳಿಂದ ಒಂದು ಬಾರಿ ದಾಖಲಾತಿಗಳನ್ನು ಪಡೆದುಕೊಂಡು ಸಾಲ ವಿತರಿಸದೆ ಪ್ರತಿ ವರ್ಷನು ಎಲ್ಲಾ ದಾಖಲಾತಿಗಳನ್ನು ಪಡೆಯುತ್ತಿರುವುದರಿಂದ ಇದು ವಿದ್ಯಾರ್ಥಿ ಮತ್ತು ಪೋಷಕರಿಗೆ ತೊಂದರೆಯಾಗುತ್ತಿದೆ.

ಆದ್ದರಿಂದ ಅರ್ಜಿಗಳನ್ನು ರದ್ದು ಪಡಿಸದೆ ಖಾಯಂ ವಿಳಾಸ ಇರುವ ಕಡೆ ವರ್ಗಾಯಿಸಿ ಒಂದೇ ಬಾರಿಗೆ ಎಲ್ಲಾ ದಾಖಲಾತಿ ಪಡೆದುಕೊಂಡು ವರ್ಷವಾರು ವಿದ್ಯಾಭ್ಯಾಸ ಮುಂದುವರಿಕೆ ನೋಡಿಕೊಂಡು ಸಾಲವಿತರಿಸಲು ಕ್ರಮಕೈಗೊಳ್ಳಬೇಕೆಂದು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:**

ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ 2022-23ನೇ ಸಾಲಿನಿಂದ ಅರಿವು ಶೈಕ್ಷಣಿಕ ಸಾಲ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2022-23ನೇ ಸಾಲಿನಲ್ಲಿ 404 ವಿದ್ಯಾರ್ಥಿಗಳಿಗೆ ರೂ.374.81 ಲಕ್ಷಗಳನ್ನು ಮತ್ತು 2023-24ನೇ ಸಾಲಿನಲ್ಲಿ 272 ವಿದ್ಯಾರ್ಥಿಗಳಿಗೆ ರೂ.260.13 ಲಕ್ಷಗಳ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. 2024-25ನೇ ಸಾಲಿನಲ್ಲಿ 300 ಹೊಸ ವಿದ್ಯಾರ್ಥಿಗಳಿಗೆ ಹಾಗೂ 704 ನವೀಕೃತ ವಿದ್ಯಾರ್ಥಿಗಳಿಗೆ ರೂ.958.00 ಲಕ್ಷ ಸೌಲಭ್ಯ ಒದಗಿಸಲಾಗುತ್ತಿದೆ.

ಶೈಕ್ಷಣಿಕ ಸಾಲ ಯೋಜನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ ವಿದ್ಯಾರ್ಥಿಯು ಯಾವುದೇ ಜಿಲ್ಲೆಯ ಶೈಕ್ಷಣಿಕ ಸಂಸ್ಥೆಯಲ್ಲಿ ಸಿಇಟಿ ಮೂಲಕ ಸೀಟ್ ಪಡೆದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯು ಅವರ ವಾಸಸ್ಥಳದ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿ ಸೌಲಭ್ಯ ಒದಗಿಸಲಾಗುತ್ತಿದೆ. ವಿದ್ಯಾರ್ಥಿಯು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ವಿಧಾನ ಸಭಾಕ್ಷೇತ್ರ ಬದಲಾವಣೆಯಾದರೂ ಸಹ ವಿದ್ಯಾರ್ಥಿಯ ವಾಸಸ್ಥಳದ ಜಿಲ್ಲೆಗೆ ಅರ್ಜಿಯನ್ನು ವರ್ಗಾಯಿಸಿಕೊಂಡು ಸೌಲಭ್ಯ ಒದಗಿಸಲಾಗುತ್ತಿದೆ. ವಿಧಾನ ಸಭಾ ಕ್ಷೇತ್ರ ಬದಲಾವಣೆ ಎಂದು ವಿದ್ಯಾರ್ಥಿಗಳಿಗೆ ಸೌಲಭ್ಯ ಒದಗಿಸದೇ ರದ್ದುಪಡಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶೈಕ್ಷಣಿಕ ಸಾಲ ಯೋಜನೆಯ ನಿಯಮಾನುಸಾರ ವಾರ್ಷಿಕ ಗರಿಷ್ಟ ರೂ.1.00ಲಕ್ಷಗಳಂತೆ ಕೋರ್ಸಿನ ಅವಧಿಗೆ 04 ವರ್ಷದ ಕೋರ್ಸಿಗೆ 04 ಕಂತುಗಳಲ್ಲಿ ರೂ.4.00 ಲಕ್ಷ ಮತ್ತು 5 ವರ್ಷದ ಕೋರ್ಸಿಗೆ 05 ಕಂತುಗಳಲ್ಲಿ ರೂ.5.00 ಲಕ್ಷಗಳ ಸಾಲ ಮಂಜೂರು ಮಾಡಿ ಬಿಡುಗಡೆ ಮಾಡಲಾಗುತ್ತದೆ.

ಮುಂದುವರೆದು ವಿದ್ಯಾರ್ಥಿಯ ಆಯ್ಕೆ ಸಮಯದಲ್ಲಿ ಸಾಲ ಮಂಜೂರಾತಿಯ ಪೂರ್ವ ದಾಖಲೆಗಳನ್ನು ಜಾತಿ / ಆದಾಯ ಪ್ರಮಾಣ ಪತ್ರ, ಸಿಇಟಿ ಪ್ರವೇಶಾತಿ ಪತ್ರ, ಆಧಾರ್ ಕಾರ್ಡ್, ಕಾಲೇಜು ಶುಲ್ಕದ (Fee Structure) ಪತ್ರ ಈ ದಾಖಲೆಗಳನ್ನು ಮೊದಲ ಹಂತದಲ್ಲಿ ವಿದ್ಯಾರ್ಥಿಯಿಂದ ಪಡೆಯಲಾಗುತ್ತದೆ.

ಸಾಲ ಮಂಜೂರಾದ ನಂತರ ಆಯಾ ವರ್ಷ ಮಂಜೂರು ಮಾಡುವ ಸಾಲದ ಮೊತ್ತಕ್ಕೆ ಕಾನೂನು ಬದ್ಧ Promissory Note, DP Note Delivery Letter, Letter of Repayment, Letter of Guarantee, Indemnity Bond & Surety Affidavit ದಾಖಲೆಗಳನ್ನು ಪ್ರತಿ ವರ್ಷ ಪಡೆಯಲಾಗುತ್ತದೆ. ಒಂದೇ ಬಾರಿ ಕೋರ್ಸಿನ ಅವಧಿಯ ಮೊತ್ತಕ್ಕೆ ದಸ್ತಾವೇಜು / ದಾಖಲಾತಿ ಪಡೆದಲ್ಲಿ ಕಾನೂನು ಬದ್ಧವಾಗಿ ಮಾನ್ಯತೆಯಾಗುವುದಿಲ್ಲ, ಕಾರಣ ಬೇರೆ ಬೇರೆ ದಿನಾಂಕಗಳಲ್ಲಿ ಕಂತುಗಳ ಮೂಲಕ ಹಣ ಬಿಡುಗಡೆಯಾಗುವುದರಿಂದ ಪ್ರತಿ ವರ್ಷ ಮಂಜೂರು ಮಾಡುವ ಮೊತ್ತಕ್ಕನುಗುಣವಾಗಿ ಮೇಲ್ಕಂಡ ದಸ್ತಾವೇಜುಗಳನ್ನು ಆಯಾ ವರ್ಷ ವಿದ್ಯಾರ್ಥಿ ಮತ್ತು ಪೋಷಕರು/ ಜಾಮೀನುದಾರರಿಂದ ಪಡೆಯಲಾಗುತ್ತದೆ. ಅಲ್ಲದೇ ವಿದ್ಯಾರ್ಥಿಯು ಕಾರಣಾಂತರಗಳಿಂದ ವಿದ್ಯಾಭ್ಯಾಸವನ್ನು ಮುಂದುವರೆಸದೇ ಇದ್ದಲ್ಲಿ (Discontinue) ಒಟ್ಟು ಮೊತ್ತಕ್ಕೆ ಒಂದೇ ಬಾರಿ ಪಡೆದ ದಾಖಲಾತಿಗಳು ಮಾನ್ಯತೆಯಾಗುವುದಿಲ್ಲ. ಈ ಕಾರಣಾಂತರಗಳಿಂದ ದಾಖಲಾತಿಗಳನ್ನು ಪಡೆದು ಸಾಲವನ್ನು ಮಂಜೂರು ಮಾಡಲಾಗುತ್ತಿದೆ.

**ಸಂಖ್ಯೆ:ಹಿಂವಕ 1017 ಬಿಂಎಂಎಸ್ 2024**

**( ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು